# ಶ್ರೀರಾಮಕೃಷ್ಣ ಲೀಲಾಸ್ಥಾನಗಳ ಸಚಿತ್ರ ಯಾತ್ರೆ

ದೇರೇ– ಆನೂರ್–ಶಾಂತಿನಾಥ–ಸಿಹೋರ್



ಶ್ರೀರಾಮಕೃಷ್ಣರ ಪೂರ್ವಜರ ಹಳ್ಳಿ ದೇರೆ ಅಲ್ಲಿನ ಜಮೀನುದಾರನ ಕಾಟ ತಾಳಲಾರದೆ ಅವರ ತಂದೆ ಕ್ಷುದಿರಾಮ ಕಾಮಾರಪುಕುರಕ್ಕೆ ವಲಸೆ ಬಂದರು. ಅವರ ಮನೆಯಿದ್ದ ಸ್ಥಳದಲ್ಲಿ ಸ್ಥಾಪಿಸಿರುವ ಶ್ರೀರಾಮಕೃಷ್ಣ ಮಂದಿರ





ಬಾಲಕ ಗದಾಧರನು ಕೆಲವು ಜನ ಭಕ್ತೆಯರೊಂದಿಗೆ ವಿಶಾಲಾಕ್ಷಿಯ ದೇವಸ್ಥಾನವಿರುವ ಆನೂರಿಗೆ ಹೊರಟಿದ್ದನು. ಮಾರ್ಗದಲ್ಲಿ ಅವನಿಗೆ ಪ್ರಜ್ಞೆ ತಪ್ಪಿತು. ಲಾಹಾ ಮನೆತನದ ಪ್ರಸನ್ನಮಯಿ ಅವನಿಗೆ ವಿಶಾಲಾಕ್ಷಿಯ ಭಾವವು ಬಂದಿದೆ ಎಂದು ಅರಿತುಕೊಂಡಳು. ನೆರೆದಿದ್ದ ಹೆಂಗಸರೆಲ್ಲ ವಿಶಾಲಾಕ್ಷಿಯ ಹೆಸರನ್ನು ಜೋರಾಗಿ ಹೇಳಲು ಪ್ರಾರಂಭಿಸಿದರು. ಕ್ರಮೇಣ ಗದಾಧರನಿಗೆ ಪ್ರಜ್ಞೆ ಬಂದಿತು.


ಮೇಲೆ: ವಿಶಾಲಾಕ್ಷಿ ದೇವಿಯ ಮಂದಿರ

ಪಕ್ಕದಲ್ಲಿ: ವಿಶಾಲಾಕ್ಷಿಯ ಸನ್ನಿಧಿ

ಶ್ರೀರಾಮಕೃಷ್ಣರು ತಮ್ಮ ಸೋದರಳಿಯ ಹೃದಯನ ಊರಾದ ಸಿಹೋರಿಗೆ ಆಗಿಂದಾಗ್ಗೆ ಹೋಗುತ್ತಿದ್ದರು. ಮಾರ್ಗಮಧ್ಯದಲ್ಲಿ ಶಾಂತಿನಾಥ ಶಿವನ ಮಂದಿರದ ದರ್ಶನ ಮಾಡುತ್ತಿದ್ದರು

ಚಿತ್ರಗಳು :

ಶಾಂತಿನಾಥ ಮಂದಿರ ಮತ್ತು ಶಾಂತಿನಾಥ ಲಿಂಗದ ಸನ್ನಿಧಿ





ಸಿಹೋರಿನಲ್ಲಿರುವ ಶ್ರೀರಾಮಕೃಷ್ಣರ ಸೋದರಳಿಯ ಹೃದಯನ ಮನೆ.